# ಬಾಲಕನ ಬುದ್ಧಿವಂತಿಕೆ

ಒಂದು ಊರಿನಲ್ಲಿ ಒಬ್ಬ ರಾಜನಿದ್ದ. ಒಮ್ಮೆ ಅವನು ತನ್ನ ಆಸ್ಥಾನದಲ್ಲಿರುವವರಿಗೆ ಮೂರು ಪ್ರಶ್ನೆಗಳನ್ನು ಕೇಳಿದ. 'ದೇವರು ಎಲ್ಲಿದ್ದಾನೆ? ಏನನ್ನು ತಿನ್ನುತ್ತಾನೆ? ಮತ್ತು ಏನು ಮಾಡುತ್ತಾನೆ?

ಯಾರೂ ಯಾವ ಉತ್ತರವನ್ನು ಕೊಡಲಿಲ್ಲ. ಮಂತ್ರಿ ಉತ್ತರ ಕೊಡಲು ಪ್ರಯತ್ನಿಸಿದನಾದರೂ ಅವನಿಗೆ ಸರಿಯಾದ ಉತ್ತರ ಹೊಳೆಯಲೇ ಇಲ್ಲ. ಅವನು ಮನೆಗೆ ಹಿಂದುರುಗುತ್ತಿದ್ದಾಗ ಅವನಿಗೆ ಎದುರಾಗಿ ಬಂದ ಆ ಊರಿನ ಬಾಲಕನೊಬ್ಬ ಅವನ ಚಿಂತೆಗೆ ಕಾರಣವೇನು ಎಂದು ಕೇಳಿದ. ಮಂತ್ರಿ ಅವನಿಗೆ ಮೂರು ಪ್ರಶ್ನೆಗಳ ವಿಚಾರವನ್ನು ತಿಳಿಸಿದ. ಆ ಬಾಲಕ ಮಂತ್ರಿಗೆ ನೆರವಾಗುವುದಾಗಿ ಹೇಳಿದ. ಮಾರನೆಯ ದಿನ ಮಂತ್ರಿ ಆ ಬಾಲಕನನ್ನು ಆಸ್ಥಾನಕ್ಕೆ ಕರೆದುಕೊಂಡು ಹೋಗಿ 'ಮಹಾರಾಜ ನಿನ್ನೆಯ ದಿನ ನೀವು ಕೇಳಿದ ಪ್ರಶ್ನೆಗಳಿಗೆ ಈ ಬಾಲಕ ಉತ್ತರ ನೀಡುತ್ತಾನೆ' ಎಂದ. ಆಗ ರಾಜ ಆಶ್ಚರ್ಯದಿಂದ ಆ ಬಾಲಕನನ್ನು ನೋಡಿದ.

ಬಾಲಕ ರಾಜನಿಗೆ, 'ನಾನು ತಮ್ಮ ಅತಿಥಿ! ತಾವು ಮೊದಲು ಅತಿಥಿಗೆ ತಿನ್ನಲು ಕುಡಿಯಲು ಏನಾದರೂ ಕೊಡಿ' ಎಂದ. ರಾಜ ಅವನಿಗೆ ಒಂದ ಬಟ್ಟಲು ತುಂಬಾ ಹಾಲು ತರಿಸಿಕೊಟ್ಟ. ಬಾಲಕ ಬಹಳ ಹೊತ್ತಿನವರೆಗೆ ಬಟ್ಟಲಿನ ಒಳಗೆ ತನ್ನ ಬೆರಳನ್ನು ಹಾಕಿ ಅದನ್ನು ಅತ್ತಿತ್ತ ತಿರುಗಿಸುತ್ತಿದ್ದ. ರಾಜ 'ನೀನು ಏನು ಮಾಡುತ್ತಿದ್ದೀಯಾ?' ಎಂದು ಪ್ರಶ್ನಿಸಿದ. ಬಾಲಕ, 'ನಾನು ಇದರಿಂದ ಬೆಣ್ಣೆ ತೆಗೆಯುತ್ತಿದ್ದೇನೆ' ಎಂದ. ರಾಜ ನಗುತ್ತಾ 'ಹಾಲಿನಲ್ಲಿ ಬೆರಳಾಡಿಸಿದರೆ ಬೆಣ್ಣೆ ಬರುವುದಿಲ್ಲ. ಹಾಲನ್ನು ಬಿಸಿ ಮಾಡಿ ಅದಕ್ಕೆ ಹೆಪ್ಪು ಹಾಕಬೇಕು, ಆಮೇಲೆ ಕಡೆದರೆ ಬೆಣ್ಣೆ ಬರುತ್ತದೆ' ಎಂದ. ಬಾಲಕ, 'ದೇವರು ಬೆಣ್ಣೆಯಂತೆ ಈ ಪ್ರಪಂಚದಲ್ಲಿದ್ದಾನೆ. ತಪಸ್ಸು, ಧ್ಯಾನ ಮತ್ತು ಚಿಂತನೆಯಿಂದ ಅವನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುತ್ತದೆ' ಎಂದ. ರಾಜ ಮತ್ತೆ, 'ದೇವರು ಏನನ್ನು ತಿನ್ನುತ್ತಾನೆ ಎಂಬುದನ್ನು ಹೇಳು' ಎಂದು ಕೇಳಿದ. ಅದಕ್ಕೆ ಬಾಲಕ 'ಪ್ರಭುಗಳೇ ತಮ್ಮ ಮೊದಲಿನ ಮತ್ತು ಈಗಿನ ವ್ಯವಹಾರದಲ್ಲಿ ಎಷ್ಟು ಅಂತರವಿದೆ ನೋಡಿ! ತಮ್ಮ ಅಹಂ ಎಲ್ಲಿ ಹೋಯಿತು? ಅದನ್ನು ದೇವರು ತಿಂದುಕೊಂಡಿದ್ದಾನೆ' ಎಂದ.

ಕೊನೆಗೆ ರಾಜ, 'ದೇವರು ಏನು ಮಾಡುತ್ತಾನೆ?' ಎಂಬ ಮೂರನೆಯ ಪ್ರಶ್ನೆ ಕೇಳಿದ. ಬಾಲಕ 'ಈ ಪ್ರಶ್ನೆಯನ್ನು ನೀವು ಗುರುವಾಗಿ ಕೇಳುತ್ತಿದ್ದಿರೋ ಇಲ್ಲವೇ ಶಿಷ್ಯನಾಗಿ ಕೇಳುತ್ತಿದ್ದೀರೋ' ಎಂದು ಪ್ರಶ್ನಿಸಿದ. ಅದಕ್ಕೆ ರಾಜ 'ಜ್ಞಾನ ಕೊಡುವವನು ಗುರು' ಎಂದಾಗ, ಬಾಲಕ 'ಆದರೆ ನೀವು ಗುರುವನ್ನು ಕೆಳಗೆ ನಿಲ್ಲಿಸಿದ್ದೀರಿ' ಎಂದ. ಇದನ್ನು ಕೇಳಿದ ರಾಜ ಕೂಡಲೇ ಕೆಳಗಿಳಿದು ಬಂದು ಆ ಬಾಲಕನನ್ನು ಸಿಂಹಾಸನದ ಮೇಲೆ ಕೂರಿಸಿದ. ಆಗ ಬಾಲಕ, 'ದೇವರು ಮಾಡುವುದು ಇದನ್ನೇ, ತನಗೆ ಬೇಕೆನ್ನಿಸಿದಾಗ ಯಾರನ್ನೋ ಸಿಂಹಾಸನದ ಮೇಲೆ ಕೂರಿಸುತ್ತಾನೆ. ಬೇಡವೆನ್ನಿಸಿದ್ದಾಗ ಇನ್ಯಾರನ್ನೋ ಸಿಂಹಾಸನದಿಂದ ಕೆಳಗೆ ಇಳಿಸಿಬಿಡುತ್ತಾನೆ' ಎಂದು ಉತ್ತರಿಸಿದ. ರಾಜ ಅವನ ಉತ್ತರದಿಂದ ಸುಪ್ರೀತನಾಗಿ ಕಾಣಿಕೆಗಳನ್ನು ನೀಡಿ ಸತ್ಕರಿಸಿದ.